

ಮೆಸೇಜ್ ಮಾಡಿದೆ...' 'ಅಲ್ಲಿ ಏನಾಯಿತು?' ಸಾವನಿ ಪಿಸುದನಿಯಲ್ಲಿ ಕೇಳಿದಳು. ಇನ್ನೊಂದು ಗುಟುಕು ವೈನ್ ಹೀರಿದ ಮಧುವಂತಿ, 'ನಾನು ಮನೆಗೆ ಬಂದ ಮೇಲೆ ಅರವಿಂದ ಸಹ ಇದನ್ನೇ ಕೇಳಿದ...' ಕೋಣೆಯಲ್ಲಿದ್ದ ಗಾಳಿ ಸ್ತಬ್ಧವಾಯಿತು. ಕಲ್ಯಾಣಿಯ ಒಳಗಿದ್ದ ಗಾಳಿಯನ್ನೆಲ್ಲಾ ಯಾರೋ ಒತ್ತಿ ಹೊರಗೆ ನೂಕಿದಂತಾಗಿ ಅವಳು ಉಸಿರಾಡಲು ಚಡಪಡಿಸಿದಳು. ದೇವರೇ ಇದೇನು ಮಾಡಿದೆ ನೀನು ಎಂದು ಮನಸ್ಸಿನಲ್ಲೇ ಚೀರಿದಳು. ಮಧುವಂತಿ ಸ್ವಲ್ಪ ಸುಧಾರಿಸಿಕೊಂಡಿದ್ದಳು. 'ಈ ಪ್ರಶ್ನೆಗೆ ನಾನು ಯಾವತ್ತಿಗೂ ಉತ್ತರಿಸುವುದಿಲ್ಲ. ಈಗ ನಿನಗೆ ಏನಾಗುತ್ತಿದೆಯೋ ನಾನು ಅದನ್ನು ಇಡೀ ರಾತ್ರಿ ಅನುಭವಿಸಿದ್ದೇನೆ. ನಾವಿಬ್ಬರೂ ಉಳಿದ ಜೀವನವನ್ನು ಈ ಹೊರೆ ಹೊತ್ತುಕೊಂಡೇ ಬದುಕಬೇಕು...' ಎಂದು ಹೇಳಿದೆ, ಅವನು ಸಿಟ್ಟಿನಲ್ಲಿ ಕಂಪಿಸುತ್ತಿದ್ದ. ನಾನು ಅವನನ್ನೇ ದಿಟ್ಟಿಸುತ್ತಾ ನಿಂತಿದ್ದೆ. ತಲೆತಗ್ಗಿಸಲಿಲ್ಲ, ತಪ್ಪು ಮಾಡಿದೆ ಕ್ಷಮಿಸು ಎನ್ನಲಿಲ್ಲ... ಅವನನ್ನು ದಿಟ್ಟಿಸುತ್ತಾ ನಿಂತೇ ಇದ್ದೆ. ನಿಧಾನವಾಗಿ ಅವನ ಕಣ್ಣುಗಳು ತುಂಬಿ ಬಂದವು. ಹತ್ತಿರ ಬಂದು ನನ್ನ ಕೈಗಳನ್ನು ಹಿಡಿದುಕೊಂಡು ಕಣ್ಣುಗಳಿಗೆ ಒತ್ತಿಕೊಂಡ. ಅದುವರೆಗೂ ಕಲ್ಯಾಣಿಯ ಕಣ್ಣುಗಳನ್ನು ತುಂಬಿಕೊಂಡಿದ್ದ ನೀರು ಚುಳ್ಳನೆ ತುಳುಕಿತು, ಥಟ್ಟನೆ ಕಣ್ಣೀರು ಒರೆಸಿಕೊಂಡಳು. 'ನನ್ನನ್ನು ಕ್ಷಮಿಸು ಮಧು' ಅಂದ. ಈಗ ಅವನ ಧ್ವನಿಯಲ್ಲಿ ನಿಜವಿತ್ತು. ಅದೇ ಕೊನೆ, ಅವನೆಂದೂ ಮತ್ತೆ ಆ ದಿನದ ಬಗ್ಗೆ ನನ್ನನ್ನು ಕೇಳಲಿಲ್ಲ, ನಾನೂ ಅವನನ್ನು ಅನುಮಾನಿಸಿ ಪ್ರಶ್ನಿಸಲಿಲ್ಲ. ಆದರೂ ಗಮನಿಸುತ್ತಲೇ ಇದ್ದೆ... ಇದ್ದೇನೆ... ಈಗಲೂ... ಮಧುವಂತಿಯ ಧ್ವನಿಯಲ್ಲಿ ಸಣ್ಣ ನಡುಕ. ಸಾವನಿ ಮಧುವಂತಿಯನ್ನೇ ದಿಟ್ಟಿಸುತ್ತಿದ್ದಳು. 'ಐ ಲವ್ ಯೂ' ಎಂದ ವಿಭಾವರಿ ಅವಳನ್ನು ಮೆಚ್ಚುಗೆಯಿಂದ ನೋಡಿದಳು. ಯಾರನ್ನು ತಾನು ತನ್ನ ಆಜನ್ಮ ಶತ್ರು ಎಂದುಕೊಂಡಿದ್ದೆನೋ ಅವಳು ಯಾಕೆ ನನ್ನದೇ ಇನ್ನೊಂದು ರೂಪದ ಹಾಗೆ ಕಾಣುತ್ತಾಳೆ ಎಂದು ಕಲ್ಯಾಣಿ ದಿಟ್ಟಿಸುತ್ತಲೇ ಇದ್ದಳು. ಅರವಿಂದ ಎನ್ನುವ ಎರಡಲುಗಿನ ಕತ್ತಿ ಒಂದೆಡೆ ನನ್ನನ್ನೂ ಇನ್ನೊಂದೆಡೆ ಮಧುವಂತಿಯನ್ನೂ ಸೀಳಿದೆ ಎಂದುಕೊಂಡವಳು, ಪಾಪ ಅವನೂ ನೊಂದನಲ್ಲ ಎಂದು ಸಂಕಟಪಟ್ಟಳು. ಈ ಬೆಂಕಿ ಮೂವರನ್ನೂ ಸುಟ್ಟಿತ್ತು. ತಾನು ಯಾಕಾದರೂ ಈ ಪ್ರಶ್ನೆ ಕೇಳಿದೆನೋ ಎಂದು ಸಾವನಿ ಪಶ್ಚಾತ್ತಾಪ ಪಟ್ಟಳು. ಯಾರಲ್ಲೂ ಹೇಳಿಕೊಳ್ಳದ ಈ ವಿಷಯವನ್ನು ಈ ಹೊಸಬರ ಮುಂದೆ ಹೇಳಿಕೊಂಡಿದ್ದಕ್ಕೆ ಹಗುರಾದಂತೆ ಕಾಣಿಸುತ್ತಿದ್ದ ಮಧುವಂತಿ, 'ಚಲೋ ಚಲೋ... ಆಟ ಆಡೋಣ' ಎಂದು ಬಾಟಲಿಯನ್ನು ತಿರುಗಿಸಿದಳು. ಈ ಸಲ ಬಾಟಲಿ ಸಾವನಿಯ ಕಡೆ ತಿರುಗಿತು. 'ಟ್ರೂತ್ ಆರ್ ಡೇರ್?' ಮಧುವಂತಿ ಕೇಳಿದಳು. 'ಟ್ರೂತ್' ಸಾವನಿ ಉತ್ತರಿಸಿದಳು. ವಾತಾವರಣವನ್ನು ಹಗುರಗೊಳಿಸಲೆಂದು ವಿಭಾವರಿ ಮುಗುಳ್ನಗುತ್ತಾ, 'ಈ ಕ್ಷಣ ನೀನು ಕೋರಿಕೊಂಡಿದ್ದು ಸಿಗುತ್ತದೆ ಎಂದರೆ ನೀನು ಏನು ಕೇಳುವೆ?' ಸಾವನಿ ಒಮ್ಮೆ ಕಣ್ಣುಗಳನ್ನು ಮುಚ್ಚಿಕೊಂಡಳು. '**Someone to hold my hands softly and keep holding...** ಮೋಹ ಅಲ್ಲ, ಕಾಮ ಅಲ್ಲ, ಸುಮ್ಮನೆ ಯಾರಾದರೂ ಮಾತೇ ಇಲ್ಲದೆ ನನ್ನ ಕೈಹಿಡಿದುಕೊಂಡು ಕೂರಬೇಕು...' ಸಾವನಿ – ಸುಂದರಿ, ರಾಜ್ಯಪ್ರಶಸ್ತಿ ಪಡೆದ ನೃತ್ಯಗಾತಿ. ದೇಶದೆಲ್ಲೆಡೆ ಅವಳ ಕಾರ್ಯಕ್ರಮಗಳು ನಡೆಯುತ್ತವೆ. ಅವಳು ಇದನ್ನು ಕೇಳಬಹುದು ಎಂದು ಯಾರೂ ಊಹಿಸಿರಲಿಲ್ಲ. ಕಲ್ಯಾಣಿ ಕೈಚಾಚಿ ಸಾವನಿಯ ಕೈಯನ್ನು ಹಿಡಿದುಕೊಂಡಳು, 'ಆದರೆ ಅದನ್ನು ನಾನು ಬೇಡಿ ಪಡೆಯಬಾರದು' ಸಾವನಿ ಮಾತನ್ನು ಪೂರ್ತಿ ಮಾಡಿ ವಿಷಾದದಿಂದ ನಕ್ಕಳು. ವಿಭಾವರಿಯ ಮನಸ್ಸಿನಲ್ಲಿದ್ದ ಸಿಂಹಾಸನಗಳು ಒಂದೊಂದಾಗಿ ಉರುಳುತ್ತಿದ್ದವು. ಸಾವನಿ, ಮಧುವಂತಿಯರ ಸಂಕಟ ತನ್ನ ಊರಿನ ಯಾವುದೇ ಹೆಣ್ಣುಗಳ ಸಂಕಟಕ್ಕಿಂತ ಭಿನ್ನವಾಗಿಲ್ಲ ಅನ್ನಿಸಿತು. ಈ ಸಂಕಟ ತಮ್ಮೆಲ್ಲರನ್ನೂ ಹತ್ತಿರಾಗಿಸುತ್ತಿದೆ ಎಂದುಕೊಂಡಳು. ಬಾಟಲ್ ಕೈಗೆತ್ತಿಕೊಂಡ ಸಾವನಿ ತಿರುಗಿಸಿದ ಬಾಟಲ್ ಮತ್ತೆ ಮಧುವಂತಿಯ ಕಡೆಗೆ ತಿರುಗಿತು. ಅವಳ ಸರದಿ ಮುಗಿದಿತ್ತಾದರಿಂದ ಅದನ್ನು